ಶ್ರೀಶೈಲ ತಂದೆ ಶಿವಾನಂದ

ದಿನಾಂಕ 16-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು :- ಶ್ರೀ ಎ.ಎಲ್.ಕೆ ವಕೀಲರಿಂದ :-**

ನಾನು ಮತ್ತು ಶಿವಪುತ್ರಪ್ಪ ಸಂಬಂಧಿಕರು ಎಂದರೆ ಸರಿಯಲ್ಲ. ಶಿವಪುತ್ರಪ್ಪ ನಮ್ಮ ಓಣಿಯವರು. ಸುಮಾರು ೩೦ ವರ್ಷಗಳಿಂದ ಪರಿಚಯ ಇರುತ್ತಾರೆ. ನಮ್ಮ ಮನೆ ಮತ್ತು ಶಿವಪುತ್ರಪ್ಪನ ಮನೆ ೩೦ ಫೀಟ್ ಅಂತರದಲ್ಲಿರುತ್ತವೆ. ೧ನೇ ಅರ್ಜಿದಾರಳು ಮತ್ತು ೧ನೇ ಎದುರುದಾರನ ಮದುವೆ ಆದ ಬಗ್ಗೆ ನನಗೆ ಗೊತ್ತಿರುತ್ತದೆ. ಮದುವೆಗೆ ಮುಂಚೆ ವರದಕ್ಷಿಣೆ ಮತ್ತು ವರೋಪಚಾರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮದುವೆಯ ಯಾದಿಯಲ್ಲಿ ನನ್ನ ಸಹಿ ಇರುವುದಿಲ್ಲ. 4 ರಿಂದ ೮ನೇ ಎದುರುದಾರರು ಶಿವಪುತ್ರಪ್ಪನ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಅವರು ಅವರವರ ಗಂಡನ ಮನೆಯಲ್ಲಿ ಇರುತ್ತಾರೆ. ಎಲ್ಲಾ ಎದುರುದಾರರು ೧ನೇ ಅರ್ಜಿದಾರಳಿಗೆ ತವರು ಮನೆಯಿಂದ ಹಣ ಮತ್ತು ವರದಕ್ಷಿಣೆ ಹಾಗೂ ಬಂಗಾರ ತೆಗೆದುಕೊಂಡು ಬರುವಂತೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ೧ನೇ ಅರ್ಜಿದಾರಳಿಗೆ ಹೊಡೆಬಡೆ ಮಾಡಿದ ವಿಷಯ ನಮ್ಮ ಮನೆ ದೂರ ಇರುವುದರಿಂದ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಶಿವಪುತ್ರಪ್ಪರವರ ಮನೆಯಲ್ಲಿ ಏನೇ ಗಲಾಟೆಯಾದರೂ ನಮ್ಮ ಮನೆಗೆ ಗೊತ್ತಾಗುತ್ತದೆ ಎಂದರೆ ಸರಿ. ೧ನೇ ಅರ್ಜಿದಾರಳಿಗೆ ಮಾನಸಿಕ ಹಿಂಸೆ ಕೊಟ್ಟಿದ್ದರಿಂದ ಮನೆಯ ಮೇಲಿಂದ ಬಿದ್ದು ಆತ್ಮಹತ್ಯೆಗೆ ಪ್ರಯತ್ನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ೧ನೇ ಅರ್ಜಿದಾರಳಿಗೆ ಮನೆಯ ಮೇಲಿಂದ ಬಿದ್ದಿದ್ದರಿಂದ ಆಸ್ಪತ್ರೆಗೆ ಸೇರಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಕಾಲು ಜಾರಿ ಬಿದ್ದು ಪೆಟ್ಟು ಹತ್ತಿಸಿಕೊಂಡಿರುತ್ತಾಳೆ ಎನ್ನುತ್ತಾರೆ. ೧ನೇ ಅರ್ಜಿದಾರಳು ಸುಮಾರು 4-00 ಗಂಟೆಯ ನಂತರ ಮನೆಯ ಮೇಲಿಂದ ಬಿದ್ದಿರುತ್ತಾಳೆ. ಈ ಘಟನೆ ನಡೆದ ನಂತರ ೧ನೇ ಅರ್ಜಿದಾರಳ ತಂದೆ ಬಂದು ಠಾಣೆಗೆ ಕೇಸು ಕೊಡಲು ಹೋಗಿದ್ದರು ಎಂದರೆ ಸರಿ. ಆಗ ನನ್ನನ್ನು ಮತ್ತು 4-6 ಜನರನ್ನು ಪೋಲಿಸರು ಕರೆಸಿದ್ದರು. ಎದುರುದಾರರು ೧ನೇ ಅರ್ಜದಾರಳಿಗೆ ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂದು ತಪ್ಪೊಪ್ಪಿಗೆ ಬರೆದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

2. ಶಿವಪುತ್ರಪ್ಪ ಈಗ ಬಾಂಡ್ ರೈಟರ್ ಇರುತ್ತಾರೆ ಎಂದರೆ ಸರಿಯಲ್ಲ. ಮೊದಲು ಅವರು ಬಾಂಡ್ ರೈಟರ್ ಇದ್ದರು. ಶಿವಪುತ್ರಪ್ಪ ತಿಂಗಳಿಗೆ ಒಂದು ಲಕ್ಷ ದುಡಿಯುತ್ತಾನೆ ಎಂದರೆ ಸರಿಯಲ್ಲ. ಅವರ ಮಗ ಟ್ರಾನ್ಸ್ ಪೋರ್ಟ್ ವ್ಯವಹಾರ ಮತ್ತು ಚಾಲಕನಿದ್ದು ತಿಂಗಳಿಗೆ ಒಂದು ಲಕ್ಷ ದುಡಿಯುತ್ತಾನೆ ಎಂದರೆ ಸರಿಯಲ್ಲ. ಶಿವಪುತ್ರಪ್ಪನಿಗೆ ಮುಧೋಳದಲ್ಲಿ ಎರಡು ಪ್ಲಾಟ್ ಹಾಗೂ ಎರಡು ಮನೆ ಇವೆ ಎಂದರೆ ಸರಿಯಲ್ಲ. ಒಂದು ಮನೆ ಮಾರಿ ಒಂದೆ ಮನೆ

ಉಳಿದಿರುತ್ತದೆ. ಅರ್ಜಿದಾರರು ಕೇಳಿದಂತೆ ಜೀವನಾಂಶ ಕೊಡಲು ಎದುರುದಾರರು ಸಮರ್ಥರಿದ್ದಾರೆ ಎಂದರೆ ಸರಿಯಲ್ಲ. ನಾವು ಎದುರುದಾರರಿಗೆ ಸಹಾಯ ಮಾಡಲು ಅವರ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.